# ರಾಜಕೀಯ ಸಂಸ್ಕೃತಿ ಮತ್ತು ನಾಗರಿಕರು ರಾಜಕೀಯ ಭಾಗವಹಿಸುವಿಕೆಯಲ್ಲಿನ ಬದಲಾವಣೆಗಳು

ನಾಗರಾಜ ಎನ್.ಟಿ.
ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು, ಚನ್ನರಾಯಪಟ್ಟಣ.

DOI: https://doi.org/10.5281/zenodo.18848782

**ABSTRACT:**

ರಾಜಕೀಯ ಸಂಸ್ಕೃತಿ ಮತ್ತು ರಾಜಕೀಯ ಭಾಗವಹಿಸುವಿಕೆಯು ಪ್ರಜಾಪ್ರಭುತ್ವ ವ್ಯವಸ್ಥೆಯ ಯಶಸ್ಸಿನ ಪ್ರಮುಖ ಆಧಾರಸ್ತಂಭಗಳಾಗಿವೆ. ಪ್ರಜೆಗಳ ಮೌಲ್ಯಗಳು, ನಂಬಿಕೆಗಳು ಹಾಗೂ ನಿಲುವುಗಳು ವ್ಯವಸ್ಥೆಯ ಕಾರ್ಯವೈಖರಿಯನ್ನು ನಿರ್ಧರಿಸುತ್ತವೆ. ಗ್ಯಾಬ್ರಿಯಲ್ ಆಲ್ಮಂಡ್ ಮತ್ತು ಲೂಸಿಯನ್ ಪೈ ಅವರಂತಹ ಚಿಂತಕರು ವಿಶ್ಲೇಷಿಸಿರುವಂತೆ, ಸಂಕುಚಿತ, ವಿಷಯ, ಸಹಭಾಗಿ ಹಾಗೂ ನಾಗರಿಕ ಸಂಸ್ಕೃತಿಗಳು ಜನರ ರಾಜಕೀಯ ಪ್ರಜ್ಞೆಯನ್ನು ಬಿಂಬಿಸುತ್ತವೆ. ಇತಿಹಾಸ, ಭೌಗೋಳಿಕತೆ ಹಾಗೂ ಸಾಮಾಜಿಕ–ಆರ್ಥಿಕ ಅಂಶಗಳು ಈ ಸಂಸ್ಕೃತಿಯನ್ನು ರೂಪಿಸುತ್ತವೆ. ಪ್ರಜಾಪ್ರಭುತ್ವದಲ್ಲಿ ನಾಗರಿಕರ ಸಕ್ರಿಯ ಪಾಲ್ಗೊಳ್ಳುವಿಕೆಯು ಕೇವಲ ಆಡಳಿತಗಾರರ ಆಯ್ಕೆಗೆ ಸೀಮಿತವಾಗಿರದೆ, ಸಾರ್ವಜನಿಕ ನೀತಿ ನಿರೂಪಣೆ, ಸರ್ಕಾರವನ್ನು ಜವಾಬ್ದಾರಿಯುತವಾಗಿಸುವಿಕೆ ಮತ್ತು ವ್ಯವಸ್ಥೆಯ ಸ್ಥಿರತೆಯನ್ನು ಕಾಯ್ದುಕೊಳ್ಳುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ. ಜಾಗೃತ ನಾಗರಿಕ ಸಂಸ್ಕೃತಿಯಿಂದ ಮಾತ್ರ ಅರ್ಥಪೂರ್ಣ ರಾಜಕೀಯ ಭಾಗವಹಿಸುವಿಕೆ ಮತ್ತು ಸುಭದ್ರ ಪ್ರಜಾಪ್ರಭುತ್ವ ಸಾಧ್ಯ ಎಂಬುದನ್ನು ಇಲ್ಲಿ ಸಮಗ್ರವಾಗಿ ವಿಶ್ಲೇಷಿಸಲಾಗಿದೆ.

**KEYWORDS:**

ರಾಜಕೀಯ ಸಂಸ್ಕೃತಿ, ರಾಜಕೀಯ ಭಾಗವಹಿಸುವಿಕೆ, ಪ್ರಜಾಪ್ರಭುತ್ವ, ನಾಗರಿಕ ಸಂಸ್ಕೃತಿ, ರಾಜಕೀಯ ವ್ಯವಸ್ಥೆ.

**ಪೀಠಿಕೆ:**

ರಾಜಕೀಯ ಸಂಸ್ಕೃತಿಯು ಆಧುನಿಕ ರಾಜಕೀಯ ಸಿದ್ಧಾಂತ ವ್ಯಾಪ್ತಿಗೆ ಸೇರಿದೆ, ರಾಜಕೀಯ ಸಮಾಜ ವಿಜ್ಞಾನದ ಮಹತ್ವದ ಪರಿಕಲ್ಪನೆಯಾಗಿದೆ. ಜನರು ತಮ್ಮ ಅವಶ್ಯಕತೆಗಳನ್ನು ಪೂರೈಸಲು ಮತ್ತು ಸಮೃದ್ಧ ಜೀವನ ನಡೆಸಲು ನಿರಂತರವಾಗಿ ಹೋರಾಡುತ್ತಾರೆ. ಅಂಥ ಹೋರಾಟದಲ್ಲಿ ಅವರು ಕೆಲವು ಅನಿವಾರ್ಯದ ಸಂಘರ್ಷ ಅಥವಾ ಘರ್ಷಣೆಗಳನ್ನು ಅನುಭವಿಸಬೇಕಾಗುತ್ತದೆ. ಒಮ್ಮತದ ಕೊರತೆಯಿಂದಲೇ ಘರ್ಷಣೆಗಳು ಉದ್ಭವಿಸುತ್ತವೆ. ಅಲ್ಲದೆ ಘರ್ಷಣೆಗಳಿಲ್ಲದ ಸಮಾಜವು ಬರಿ ನಿರ್ಜೀವ ಸಮಾಜವೊಂದೇ ಹೇಳಬಹುದು. ಘರ್ಷಣೆಗಳನ್ನು ಬಗೆಹರಿಸಲು ರಾಜಕೀಯವು ಅನಿವಾರ್ಯವಾಗುತ್ತದೆ. ರಾಜಕೀಯ ಸಮಾಜದ ಸಮಸ್ಯೆಗಳಿಗೆ ಸ್ಪಂದಿಸುವ ಸಮಾಜದ ಅಂಗವಾಗಿದೆ. ರಾಜಕೀಯವು ಜನರ ಸಾಮೂಹಿಕ ಮೌಲ್ಯಗಳನ್ನು ಮತ್ತು ಭಾವನೆಗಳನ್ನು ವ್ಯಕ್ತಪಡಿಸುತ್ತದೆ. ರಾಜಕೀಯ ಸಂಸ್ಥೆಗಳ ನೀತಿಗಳನ್ನು ಮೂಲತಃ ರಾಜಕೀಯ ವ್ಯವಸ್ಥೆಯೆಡೆಗೆ ಇರುವ ಜನರ ಮನೋಭಾವನೆಗಳಿಂದ ಅಥವಾ ನಿಲುವುಗಳಿಂದ ನಿರ್ಧಾರವಾಗುತ್ತದೆ. ಏಕೆಂದರೆ ಮೌಲ್ಯಗಳು, ಗುಂಪಿನ ಗುರುತುಗಳು, ನಿಷ್ಠೆ ಮತ್ತು ಜನರ ಬದ್ಧತೆಗಳು ಒಂದು

ರಾಜಕೀಯ ವ್ಯವಸ್ಥೆಯ ಕಾರ್ಯವೈಖರಿಯ ಮೇಲೆ ಪ್ರಭಾವ ಬೀರುವ ರಾಷ್ಟ್ರ ನಿರ್ಮಾಣದ ಮೂಲ ದೃಷ್ಟಿಕೋನಗಳೆಂದು ಪರಿಗಣಿಸಲಾಗಿದೆ. ದೇಶದ ಸಂವಿಧಾನವು ರಾಜಕೀಯ ವ್ಯವಸ್ಥೆಯ ಅಸ್ಥಿಪಂಜರದಂತಿದ್ದರೆ ಜನರ ನಿಲುವುಗಳು ಅದರ ಜೀವಾಳವಿದ್ದಂತೆಯೇ ಸರಿ.

ರಾಜಕೀಯ ವ್ಯವಸ್ಥೆಯು ಸಾಂಪ್ರದಾಯಿಕ ಅಥವಾ ಆಧುನಿಕ ಪ್ರಜಾಸತ್ತಾತ್ಮಕ ಅಥವಾ ನಿರಂಕುಶ ಪ್ರಭುತ್ವ ಅಥವಾ ಸರ್ವಾಧಿಕಾರತ್ವದ ವಿಧಗಳಿಂದ ಕೂಡಿದ್ದರೂ, ಭಾಗವಹಿಸುವಿಕೆಯು ಆ ವಿವಿಧ ರಾಜಕೀಯ ವ್ಯವಸ್ಥೆಗಳ ಪ್ರಮುಖ ಅಂಗವೆಂದೇ ಪರಿಗಣಿಸಲಾಗಿದೆ. ನಿರಂಕುಶ ಪ್ರಭುತ್ವ ಮತ್ತು ಸಾಂಪ್ರದಾಯಿಕ ರಾಜಕೀಯ ವ್ಯವಸ್ಥೆಗಳಲ್ಲಿ ಭಾಗವಹಿಸುವಿಕೆಯ ಪ್ರಮಾಣ ಅತಿ ಕಡಿಮೆ ಇದ್ದರೆ, ಪ್ರಜಾಪ್ರಭುತ್ವ ರಾಜಕೀಯ ವ್ಯವಸ್ಥೆಯಲ್ಲಿ ಅದರ ಪ್ರಮಾಣ ಅತಿಹೆಚ್ಚು ಇರುವುದನ್ನು ಕಂಡುಬರುತ್ತದೆ. ರಾಜಕೀಯ ವ್ಯವಸ್ಥೆಗಳ ಸ್ವರೂಪ ಮತ್ತು ಕಾರ್ಯವಿಧಾನಗಳನ್ನು ಮೂಲತಃ ರಾಜಕೀಯ ಭಾಗವಹಿಸುವಿಕೆ ಅಥವಾ ರಾಜಕೀಯದಲ್ಲಿ ತೊಡಗಿಸಿಕೊಳ್ಳುವಿಕೆ ಮೂಲಕ ವಿಶ್ಲೇಷಿಸಬಹುದಾಗಿದೆ. ಪ್ರಜಾಪ್ರಭುತ್ವದ ರಾಜಕೀಯ ವ್ಯವಸ್ಥೆಯಲ್ಲಿಯೇ ನಾಗರಿಕರಿಗೆ ರಾಜಕೀಯದಲ್ಲಿ ಭಾಗವಹಿಸಲು ಹೆಚ್ಚಿನ ಪ್ರಮಾಣದ ಅವಕಾಶಗಳಾಗಿರುತ್ತವೆ. ನಾಗರಿಕರ ಭಾಗವಹಿಸುವಿಕೆ ಪ್ರಮಾಣದಲ್ಲಿ ಕೆಲವು ವ್ಯತ್ಯಾಸಗಳು ಕಂಡುಬರುತ್ತವೆ. ಏಕೆಂದರೆ ನಾಗರಿಕರು ತಮ್ಮ ಜೀವನ ಮಟ್ಟ, ಶಿಕ್ಷಣ, ಸಾಮಾಜಿಕ ಪರಿಸರ, ರಾಜಕೀಯ ಸಂಸ್ಕೃತಿ, ಮುಂತಾದವುಗಳ ಮಟ್ಟಗಳಲ್ಲಿ ಭಿನ್ನತೆಯಿಂದ ಕೂಡಿರುತ್ತದೆ. ರಾಜಕೀಯ ಭಾಗವಹಿಸುವಿಕೆಯಿಂದ ಒಂದು ಸರ್ಕಾರವು ಜನರಿಗೆ ಜವಾಬ್ದಾರಿಯಾಗಿರುತ್ತಾರೆ. ಹಾಗೆಯೇ ಅದರಿಂದಲೇ ಸರ್ಕಾರವು ಜನರ ಬೇಡಿಕೆಗಳಿಗೆ ಮತ್ತು ಆಕಾಂಕ್ಷೆಗಳಿಗೆ ಸ್ಪಂದಿಸಲು ಮಹತ್ವದ ಪಾತ್ರವನ್ನು ವಹಿಸುತ್ತದೆ.

ನಾಗರಿಕರ ರಾಜಕೀಯ ಭಾಗವಹಿಸುವಿಕೆಯು ಪ್ರಜಾಪ್ರಭುತ್ವದ ಉಗಮದಿಂದಲೇ ಬೆಳೆದು ಬಂದಿತು. ಪ್ರಾಚೀನ ಗ್ರೀಕ್ ನಗರ ರಾಜ್ಯಗಳಲ್ಲಿ ನಾಗರಿಕರು ಪ್ರತ್ಯಕ್ಷವಾಗಿ ರಾಜಕೀಯ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಿದ್ದರು. ಏಕೆಂದರೆ ಆ ಕಾಲದಲ್ಲಿ ಪ್ರತ್ಯಕ್ಷ ಪ್ರಜಾಪ್ರಭುತ್ವದ ವ್ಯವಸ್ಥೆ ಇತ್ತು. ಹಾಗೆಯೇ ಸ್ವಿಟ್ಜರ್ಲ್ಯಾಂಡ್ ದೇಶದಲ್ಲಿಯೂ ಪ್ರತ್ಯಕ್ಷ ಪ್ರಜಾಪ್ರಭುತ್ವ ವ್ಯವಸ್ಥೆ ಇರುವುದರಿಂದಲೇ ನಾಗರಿಕರು ರಾಜಕೀಯ ವ್ಯವಸ್ಥೆಯಲ್ಲಿ ಪ್ರತ್ಯಕ್ಷವಾಗಿ ಪಾಲ್ಗೊಳ್ಳುತ್ತಾರೆ. ಆದರೆ ಈಗಿನ ಪ್ರತಿನಿಧಿಯ ಅಥವಾ ಅಪ್ರತ್ಯಕ್ಷ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಾಗರಿಕರು ನೇರವಾಗಿ ರಾಜಕೀಯ ಭಾಗವಹಿಸುವಿಕೆಯಲ್ಲಿ ಪಾಲ್ಗೊಳ್ಳುವಂತಿಲ್ಲ.

**ರಾಜಕೀಯ ಸಂಸ್ಕೃತಿ ಅರ್ಥ ಮತ್ತು ಅದರ ಸ್ವರೂಪ :**

ರಾಜಕೀಯ ಸಂಸ್ಕೃತಿ ಎಂಬ ಪದವು 18ನೇ ಶತಮಾನದ ಈಚೆಗೆ ಬರ್ನಾರ್ಡ್ ಶಾ ಪ್ರಪ್ರಥಮವಾಗಿ ಬಳಸಿದರು. ಆದರೆ ಆಧುನಿಕ ರಾಜಕೀಯ ಶಾಸ್ತ್ರದ ಒಂದು ಪರಿಕಲ್ಪನೆಯಂತೆ ಎರಡನೇ ಜಾಗತಿಕ ಯುದ್ಧದ ನಂತರ (1950ರಲ್ಲಿ) ಅದರ ವಿವರಣಾತ್ಮಕವಾದ ಬೆಳವಣಿಗೆಯಾಗುವಲ್ಲಿ ಗ್ಯಾಬ್ರಿಯಲ್ ಆಲ್ಮಂಡ್‌ರೇ ಪ್ರಥಮವಾಗಿ ಪ್ರಯತ್ನಿಸಿದರು. ಕ್ರಮೇಣ 1960ರ ದಶಕದಲ್ಲಿ ಕೆಲವು ವೈಜ್ಞಾನಿಕ ಅಥವಾ ಅನುಭವವಾದದ ಸಂಶೋಧನೆಗಳ ಮೂಲಕ ಲೂಸಿಯನ್ ಪೈ ಸಿಡ್ನಿವರ್ಬಾ ಮುಂತಾದವರು ಆ ಪರಿಕಲ್ಪನೆಯ ಬೆಳವಣಿಗೆಗೆ ಸಾಕಷ್ಟು ಕೊಡುಗೆ ನೀಡಿದ್ದಾರೆ.

**ರಾಜಕೀಯ ಸಂಸ್ಕೃತಿ ಎಂದರೆ,**

- ರಾಜಕೀಯದೆಡೆಗೆ ಇರುವ ಜನರ ವೈಯಕ್ತಿಕ ಮತ್ತು ಸಾಮೂಹಿಕ ವಿಚಾರಗಳು, ನಂಬಿಕೆಗಳು, ಮನೋಭಾವಗಳು, ನಿಲುವುಗಳು ಇತ್ಯಾದಿ.

- ರಾಜಕೀಯ ವಿವಾದಗಳಿಗೆ ಮತ್ತು ರಾಜಕೀಯ ವ್ಯವಸ್ಥೆಗೆ ಸಂಬಂಧಿಸಿದ ಸಮಾಜದ ಮೌಲ್ಯಗಳು, ನಂಬಿಕೆಗಳು ಮತ್ತು ಮನೋಭಾವಗಳು ಅಥವಾ ನೆಲೆಗಳು.
- ಲುಸಿಯನ್ ಪೈ ರವರು "ರಾಜಕೀಯ ಪ್ರಕ್ರಿಯೆಗೆ ಕ್ರಮಬದ್ಧತೆ ಮತ್ತು ಅರ್ಥ ನೀಡುವ ಮತ್ತು ರಾಜಕೀಯ ವ್ಯವಸ್ಥೆಯಲ್ಲಿನ ವರ್ತನೆ ನಿಯಮಬದ್ಧವಾಗಿ ಮಾಡಲು ಇರುವ ಪ್ರಮುಖ ನಿಯಮಗಳಿಗೆ ಸಂಬಂಧಿಸಿದ ನಿಲುವುಗಳು ನಂಬಿಕೆಗಳು ಮತ್ತು ರಸಭಾವಗಳು (Sentiments)"

**ರಾಜಕೀಯ ಸಂಸ್ಕೃತಿಯ ಸ್ವರೂಪ**

1. ಜ್ಞಾನಾತ್ಮಕ ದಿಗ್ದರ್ಶನ ಅಥವಾ ನೆಲೆಗಳ ನಿರ್ದೇಶನಗಳು. (Cognitive Orientations)
2. ಅನುರಾಗಾತ್ಮಕ ನೆಲೆಗಳ ನಿರ್ದೇಶನಗಳು. (Affective Orientations)
3. ಮೌಲ್ಯ ನಿರ್ಧಾರಕ ನೆಲೆ ನಿರ್ದೇಶನಗಳು. (Evaluative Orientations)
    - ಜ್ಞಾನಾತ್ಮಕ ನೆಲೆಗಳ ನಿರ್ದೇಶನಗಳು : ಅಂದರೆ ರಾಜಕೀಯ ವ್ಯವಸ್ಥೆಯ ಬಗ್ಗೆ ಇರುವ ಖಚಿತ ಅಥವಾ ಖಚಿತವಲ್ಲದ ಜ್ಞಾನ.
    - ಅನುರಾಗಾತ್ಮಕ ನೆಲೆ ನಿರ್ದೇಶನಗಳು : ಅಂದರೆ ರಾಜಕೀಯ ವಸ್ತುಗಳ ಬಗ್ಗೆ ಇರುವ ಮಮತೆ, ಆಸಕ್ತಿ ಮತ್ತು ತಿರಸ್ಕಾರ.
    - ಮೌಲ್ಯ ನಿರ್ಧಾರಕ ನೆಲೆ ನಿರ್ದೇಶನಗಳು: ಅಂದರೆ ರಾಜಕೀಯ ವಸ್ತುಗಳ ಮತ್ತು ಘಟನೆಗಳ ಮೇಲೆ ಇರುವ ಅಭಿಪ್ರಾಯಗಳು ಮತ್ತು ನಿರ್ಣಯಗಳು ಅಥವಾ ತೀರ್ಪುಗಳು.

(ರಾಜಕೀಯ ವಸ್ತುಗಳೆಂದರೆ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ, ರಾಜಕೀಯ ಪಕ್ಷಗಳು, ನಾಗರಿಕ ಸೇವೆ, ಒತ್ತಡ ಗುಂಪುಗಳು ಮುಂತಾದವುಗಳು.)

**ರಾಜಕೀಯ ಸಂಸ್ಕೃತಿಯ ವಿಧಗಳು**

1. ಸಂಕುಚಿತ ರಾಜಕೀಯ ಸಂಸ್ಕೃತಿ
2. ವಿಷಯ ರಾಜಕೀಯ ಸಂಸ್ಕೃತಿ
3. ಸಹಭಾಗಿಯ ರಾಜಕೀಯ ಸಂಸ್ಕೃತಿ
4. ನಾಗರಿಕ ಸಂಸ್ಕೃತಿ

**ಸಂಕುಚಿತ ರಾಜಕೀಯ ಸಂಸ್ಕೃತಿ :**

ಈ ಬಗೆಯ ಸಂಸ್ಕೃತಿಯಲ್ಲಿ ಜನರ ನೆಲೆಯ ನಿರ್ದೇಶನವು ಅವರ ಧಾರ್ಮಿಕ ಮತ್ತು ಸಾಮಾಜಿಕ ನೆಲೆಯ ನಿರ್ದೇಶನದಿಂದ ಬೇರ್ಪಡಿಸುವಂತಿಲ್ಲ. ಜನರು ರಾಜಕೀಯವಾಗಿ ಅಷ್ಟು ಪ್ರಜ್ಞೆಯಿಂದಿರುವುದಿಲ್ಲ. ಕಾರಣ ಅವರಿಗೆ ರಾಜಕೀಯ ವ್ಯವಸ್ಥೆಯ ವ್ಯವಹಾರಗಳನ್ನು ಅಷ್ಟು ಸುಲಭವಾಗಿ ಅರಿತುಕೊಳ್ಳಲು ಸಾಧ್ಯವಿಲ್ಲ. ಅವರು ರಾಜಕೀಯ ವ್ಯವಸ್ಥೆಯಲ್ಲಿ ಯಾವುದೇ ಬದಲಾವಣೆಗಳನ್ನು ಬಯಸುವುದಿಲ್ಲ. ಇಂಥ ಸಂಸ್ಕೃತಿ ಇರುವುದರಿಂದಲೇ ಜನರು ಆಧುನೀಕರಣದ ಪ್ರಕ್ರಿಯೆಯಿಂದ ದೂರವಿರುವುದು ಸಹಜ. ಭಾರತದಲ್ಲಿ ಬುಡಕಟ್ಟಿನ ಮತ್ತು ಹಳ್ಳಿಗಾಡಿನ ಜನರು ಈ ರೀತಿಯ ರಾಜಕೀಯ ಸಂಸ್ಕೃತಿಯನ್ನು ಹೊಂದಿರುತ್ತಾರೆ.

**ವಿಷಯ ರಾಜಕೀಯ ಸಂಸ್ಕೃತಿ :**

ಈ ಪ್ರಕಾರ ಸಂಸ್ಕೃತಿಯಲ್ಲಿ ಜನರಿಗೆ ರಾಜಕೀಯ ವ್ಯವಸ್ಥೆಯ ಹುಟ್ಟು ಬೆಳವಣಿಗೆಯ ಬಗ್ಗೆ ಪ್ರಜ್ಞೆ ಅಥವಾ ಅರಿವು ಇದ್ದರೂ ವ್ಯವಸ್ಥೆಯ ಹೂಡುವಳಿಗಳ ಬಗ್ಗೆ ಇರುವ ಜ್ಞಾನ ಮತ್ತು ರಾಜಕೀಯ ಪ್ರಕ್ರಿಯೆಯಲ್ಲಿ ಅವರ ಪಾತ್ರ ವಾಸ್ತವಿಕವಾಗಿ ಕಾಣಿಸಿಕೊಳ್ಳುವುದಿಲ್ಲ. ಜನರು ರಾಜಕೀಯ ವ್ಯವಸ್ಥೆಯ ನ್ಯಾಯ ಬದ್ಧತೆಯನ್ನು ಮೌಲ್ಯೀಕರಿಸಲು ಅರ್ಹತೆ ಹೊಂದಿದ್ದರೂ ಅವರು ರಾಜಕೀಯ ವ್ಯವಸ್ಥೆಯ ವ್ಯವಹಾರಗಳ ಬಗ್ಗೆ ತಿಳಿದುಕೊಳ್ಳಲು ಅತೀ ಮಿತವಾದ ಸಾಮರ್ಥ್ಯ ಹೊಂದಿರುತ್ತಾರೆ. ಭಾರತದಲ್ಲಿ ಜನರು ತಮ್ಮ ರಾಜಕೀಯ ಧುರೀಣರ ಬಗ್ಗೆ ಪರಿಜ್ಞಾನ ಹೊಂದಿದ್ದರೂ ಧುರೀಣರ ಕಾರ್ಯವೈಖರಿಯನ್ನು ಮೌಲ್ಯೀಕರಿಸಲು ಸಾಮರ್ಥ್ಯ ಹೊಂದಿರುವುದಿಲ್ಲ.

ಸಹಭಾಗಿಯ ರಾಜಕೀಯ ಸಂಸ್ಕೃತಿ: ಈ ಬಗೆಯ ಸಂಸ್ಕೃತಿಯಲ್ಲಿ ಜನರು ರಾಜಕೀಯ ವ್ಯವಸ್ಥೆ ಮತ್ತು ರಾಜಕೀಯ ಪ್ರಕ್ರಿಯೆಯ ರಚನೆಯ ಮತ್ತು ಕಾರ್ಯಾತ್ಮಕ ದೃಷ್ಟಿಕೋನಗಳ ಹೂಡುವಳಿಗಳ ಮತ್ತು ಹುಟ್ಟುವಳಿಗಳ ಬಗ್ಗೆ ತಿಳಿಯಲು ಸಾಮರ್ಥ್ಯ ಹೊಂದಿರುತ್ತಾರೆ. ಭಾರತದಲ್ಲಿ ಅತೀ ಮೇಲುವರ್ಗದ ಗಣ್ಯರು ಈ ಬಗೆಯ ನೆಲೆ ನಿರ್ದೇಶನವನ್ನು ಹೊಂದಿರುತ್ತಾರೆ.

ರಾಜಕೀಯ ಸಂಸ್ಕೃತಿಯು ಮೇಲೆ ತಿಳಿಸಿದ ಬಗೆಗಳ ಮಿಶ್ರಣವಾಗಿದೆ. ಈ ಮೇಲಿನ ತಿಳಿಸಿದ ಸಂಸ್ಕೃತಿಯ ಬಗೆಗಳಿಗೆ ಈ ಕೆಳಗಿನ ಇನ್ನೊಂದು ವಿಧದ ಸಂಸ್ಕೃತಿಗಳನ್ನು ಸೇರಿಸಬಹುದಾಗಿದೆ.

**ನಾಗರಿಕ ಸಂಸ್ಕೃತಿ:**

ಈ ಸಂಸ್ಕೃತಿಯು ಆಧುನಿಕ ಮತ್ತು ಸಾಂಪ್ರದಾಯಗಳ ಮಿಶ್ರಣ. ಪ್ರಜಾಸತ್ತಾತ್ಮಕ ನಾಗರಿಕರು ರಾಜಕೀಯದಲ್ಲಿ ಸಕ್ರಿಯವಾಗಿ ಭಾಗವಹಿಸಬೇಕಾಗುತ್ತದೆ. ಅವನ ಆ ಭಾಗವಹಿಸುವಿಕೆಯು ವಿವೇಚನೆಯ ಆಧಾರದ ಮೇಲೆ ಇರುತ್ತದೆ. ಇಂತಹ ಸಂಸ್ಕೃತಿಯು ಜನರು ವಿವೇಚನೆಯಿಂದ ವರ್ತಿಸುವಂತೆ ಮಾಡುತ್ತದೆ. ಸಹಭಾಗಿಯ ರಾಜಕೀಯ ಸಮೃದ್ಧಿ ಹೊಂದಿದ ಜನರು ನಾಗರಿಕ ಸಂಸ್ಕೃತಿಯನ್ನು ಹೊಂದಿರುತ್ತಾರೆ. ನಾಗರಿಕ ಸಂಸ್ಕೃತಿಯು ಜನರ ರಾಜಕೀಯ ಪ್ರಕ್ರಿಯೆಯಲ್ಲಿ ಭಾಗವಹಿಸುವಿಕೆಯಲ್ಲಿ ಸಾರ್ಥಕಗೊಳಿಸುತ್ತದೆ.

ಪ್ರಜಾಸತ್ತಾತ್ಮಕ ರಾಜಕೀಯದಲ್ಲಿ ನಾಗರಿಕ ಸಂಸ್ಕೃತಿಯು ಹೊಣೆಗಾರಿಕೆಯಿಂದ ಅಥವಾ ಜವಾಬ್ದಾರಿಯ ಮೂಲಕ ಅಧಿಕಾರ ಚಲಾಯಿಸುವುದನ್ನು ಎತ್ತಿ ಹಿಡಿಯುತ್ತದೆ. ಅದಕ್ಕಾಗಿಯೇ ನಾಗರಿಕ ಸಂಸ್ಕೃತಿಯು ಅಧಿಕಾರ ಮತ್ತು ಜವಾಬ್ದಾರಿಯ ಮಧ್ಯೆ ಸಮತೋಲನ ಕಾಪಾಡುತ್ತದೆ.

**ರಾಜಕೀಯ ಸಂಸ್ಕೃತಿಯನ್ನು ನಿರ್ಧರಿಸುವ ಅಂಶಗಳು**

ರಾಜಕೀಯ ಸಂಸ್ಕೃತಿಯು ಸ್ಥಿರವಲ್ಲ. ಅದು ಬದಲಾಗುತ್ತಾ ಹೋಗುವ ಚಲನಾತ್ಮಕವಾಗಿದೆ. ರಾಜಕೀಯ ವ್ಯವಸ್ಥೆಯು ಅವಶ್ಯಕತೆಗೆ ಅನುಗುಣವಾಗಿ ಅದು ಸ್ಪಂದಿಸುತ್ತದೆ. ರಾಜಕೀಯ ಸಂಸ್ಕೃತಿಯು ಜಾಗತೀಕರಣವೇ ನಿಜವಾದ ನೆಲೆ ನಿರ್ದೇಶನವೆಂದು ಹೇಳಬಹುದು. ರಾಜಕೀಯ ವ್ಯವಸ್ಥೆಯು ಸಜಾತಿ ಅಥವಾ ವಿಜಾತೀಯದಿಂದ ಕೂಡಿರಲಿ, ಅದರೆಡೆಗೆ ಇರುವ ರಾಜಕೀಯ ಸಂಸ್ಕೃತಿಯನ್ನು ಮೂಲತಃ ಈ ಕೆಳಗಿನ ಕೆಲವು ಅಂಶಗಳ ಮೂಲಕ ನಿರ್ಧರಿತವಾಗುತ್ತದೆ.

1. ಚರಿತ್ರೆ ಅಥವಾ ಇತಿಹಾಸ

2. ಭೂಗೋಳ
3. ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ

**ಚರಿತ್ರೆ ಅಥವಾ ಇತಿಹಾಸ:**

ಒಂದು ದೇಶದ ಸಂಪ್ರದಾಯಗಳು ರಾಜಕೀಯ ಸಂಸ್ಕೃತಿಯನ್ನು ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಇದಕ್ಕೆ ಐತಿಹಾಸಿಕ ಸತ್ಯಾಂಶಗಳು ಮೂಲ ಕಾರಣವಾಗಿವೆ. ಉದಾಹರಣೆ, ಬ್ರಿಟಿಷ್ ಜನರು ಮೂಲತಃ ಸಂಪ್ರದಾಯಗಳು, ಅವರು ಸಂಪ್ರದಾಯಗಳನ್ನು ಪಾಲಿಸಿ, ನಿಧಾನವಾದ ಮತ್ತು ಕ್ರಮೇಣವಾಗಿ ಆಗುವ ಬದಲಾವಣೆಯ ಮೇಲೆ ವಿಶ್ವಾಸ ಇಡುತ್ತಾರೆ. ಅದರ ಫಲವಾಗಿಯೇ ಸಾಂಪ್ರದಾಯಿಕ ಮೌಲ್ಯಗಳನ್ನು ಆಧುನಿಕ ನಿಲುವುಗಳಿಗೆ ಸಮನ್ವಯಗೊಳಿಸಲಾಗಿದೆ. ಆದರೆ ಫ್ರೆಂಚ್ ಜನರು ತೀವ್ರಗಾಮಿಯ ಬದಲಾವಣೆಯ ಸ್ವಭಾವವನ್ನು ಹೊಂದಿದ್ದಾರೆ. ಅದಕ್ಕಾಗಿ ಅವರು 1789ರ ಕ್ರಾಂತಿಯಿಂದ ಹಿಡಿದು ಅದೆಷ್ಟೋ ಬಾರಿ ಸಂವಿಧಾನವನ್ನು ಬದಲಾಯಿಸಿ, ರಚಿಸಿದ್ದನ್ನು ಇತಿಹಾಸವು ಮರೆಯುವಂತಿಲ್ಲ. ಹಾಗೆಯೇ ಗುಲಾಮರ ಸಂಸ್ಕೃತಿಯ ಮೇಲೆ ಅವರ ಒಡೆಯರ ಪ್ರಭಾವವು ಅಷ್ಟೇ ಬೀರುತ್ತದೆ. ಅದಕ್ಕಾಗಿಯೇ ಭಾರತದ ಸ್ವಾತಂತ್ರ್ಯದ ಮೊದಲು ಭಾರತೀಯರು ಸಂಸದೀಯ ಪ್ರಜಾಪ್ರಭುತ್ವವನ್ನು ಅಳವಡಿಸಿಕೊಳ್ಳಲು ಬ್ರಿಟಿಷ್ ಒಡೆಯರೇ ಪ್ರಭಾವ ಬೀರಿದರು. ಹಾಗೇಯೇ ಅಲ್ಜೀರಿಯಾ ಮತ್ತು ವಿಯೆಟ್ನಾಂ ದೇಶದ ಜನರು ತಮ್ಮ ಫ್ರೆಂಚ್ ಒಡೆಯರ ಪ್ರಭಾವದಿಂದಲೇ ಹಿಂಸಾತ್ಮಕ ಕ್ರಾಂತಿಯ ಮಾರ್ಗಗಳನ್ನು ಅನುಸರಿಸಿದರು.

**ಭೂಗೋಳ:**

ಜನರ ರಾಜಕೀಯ ಸಂಸ್ಕೃತಿಯನ್ನು ನಿರ್ಧರಿಸುವಲ್ಲಿ ದೇಶದ ಭೌಗೋಳಿಕ ಸನ್ನಿವೇಶವು ಪ್ರಮುಖ ಪಾತ್ರವಹಿಸುತ್ತದೆ. ಉದಾಹರಣೆ :

1. ಬ್ರಿಟಿಷ್ ನಡುಗಡ್ಡೆಗಳ ದ್ವೀಪದ ಸ್ಥಿತಿಯು ದೇಶವನ್ನು ಪರಕೀಯರ ಆಕ್ರಮಣಗಳಿಂದ ಸಂರಕ್ಷಿಸಲು ಸಹಾಯ ಮಾಡಿ ಜನಾಂಗೀಯ ಭಿನ್ನತೆಗಳನ್ನು ತಲೆದೋರದಂತೆ ಪೂರಕವಾಯಿತು.
2. ಭಾರತದ ವಿಶಾಲವಾದ ಸರಹದ್ದುಗಳು ಭಾರತದ ಮೇಲೆ ವಿದೇಶಿಯರ ಆಕ್ರಮಣವಾಗಲು ಕಾರಣವಾದವು. ಹಾಗೆಯೇ ಮುಂದೆ ಪರಕೀಯರು ನಮ್ಮ ದೇಶದಲ್ಲಿಯೇ ನೆಲೆಯೂರಲು ಕಾರಣವಾಗಿ, ನಾವು ಜನಾಂಗೀಯ ಮತ್ತು ಸಾಂಸ್ಕೃತಿಕ ಭಿನ್ನತೆಗಳ ಹಿನ್ನೆಲೆಯಲ್ಲಿ ಒಂದು ಸ್ವತಂತ್ರವಾದ ಸಮಾನತೆಯ ಮೇಲೆ ಆಧಾರವಾಗಿರುವ ಸಮಾಜವನ್ನು ಕಟ್ಟಲು ಯಶಸ್ವಿಯಾಗಿದ್ದೇವೆ.

ಹಾಗೆ ನಮ್ಮ ದೇಶದ ಹಿಮಾಲಯ ಪರ್ವತಗಳು ದೇಶವನ್ನು ರಕ್ಷಿಸಲು ನೈಸರ್ಗಿಕ ಸಾಧನಗಳಾಗಿವೆ.

**ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ:**

ವಿಶ್ವದ ರಾಷ್ಟ್ರಗಳನ್ನು ಮೂಲತಃ ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳೆಂದು ವರ್ಗೀಕರಿಸಲಾಗಿದೆ. ಅಭಿವೃದ್ಧಿ ಹೊಂದಿದ ರಾಷ್ಟ್ರವು (ಅಮೇರಿಕ) ಮೂಲತಃ ಬೃಹತ್ ಉದ್ಯಮಗಳಿಂದ ಕೂಡಿದ್ದು ಅದು ಶೈಕ್ಷಣಿಕ ಮತ್ತು ಸಂಪರ್ಕ ಸಾಧನಗಳ ರಂಗಗಳಲ್ಲಿ ಅತಿ ಉನ್ನತ ಮಟ್ಟದಲ್ಲಿ ಇರುತ್ತದೆ. ಹಾಗೆಯೇ ನಿರ್ಣಯ – ನಿರೂಪಣೆಯ ಪ್ರಕ್ರಿಯೆಯಲ್ಲಿ ಜನರ ಪಾಲ್ಗೊಳ್ಳುವಿಕೆಯು ಅತಿ ವಿಶಾಲವಾಗಿದೆ. ಅಂಥ

ರಾಷ್ಟ್ರವು ತ್ವರಿತವಾದ ಬದಲಾವಣೆಯಲ್ಲಿ ವಿಶ್ವಾಸವಿಡುತ್ತದೆ. ಆದರೆ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ (ಭಾರತ) ಸಮಾಜವೂ ಜನರ ಸಂಪ್ರದಾಯಗಳಿಂದ ಕೂಡಿರುತ್ತದೆ. ಅಂಥ ಸಮಾಜವು ತೀವ್ರಗತಿಯ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಗಳಿಗೆ ಸ್ಪಂದಿಸುವುದಿಲ್ಲ.

ಸೈನಿಕವಾಗಿ, ಆರ್ಥಿಕವಾಗಿ ಮತ್ತು ತಾಂತ್ರಿಕವಾಗಿ ಅಭಿವೃದ್ಧಿ ಹೊಂದಿದ ರಾಷ್ಟ್ರವು ದುರ್ಬಲ ದೇಶಗಳ ಮೇಲೆ ತನ್ನ ಅಧಿಕಾರದ ಪ್ರಭಾವವನ್ನು ಬೀರಲು ಯಶಸ್ವಿಯಾಗುತ್ತದೆ. ಹಾಗೆಯೇ ಅದು ತನ್ನ ಜಾತ್ಯತೀತಕರಣದ ಪ್ರಕ್ರಿಯೆ ಮೂಲಕ ಆ ದುರ್ಬಲ ರಾಷ್ಟ್ರಗಳ ಮೇಲೆ ಹೊಸ ರಾಜಕೀಯ ಸಂಸ್ಕೃತಿಯನ್ನು ಹೇರುತ್ತದೆ. ಉದಾಹರಣೆ:

ಎರಡನೇ ಜಾಗತಿಕ ಯುದ್ಧದ ನಂತರ ಅಮೆರಿಕೆಯು, ಜಪಾನ್ ದೇಶವನ್ನು ಸುಮಾರು ಎರಡು ವರ್ಷಗಳ ಕಾಲ ತನ್ನ ಅಧೀನದಲ್ಲಿಟ್ಟುಕೊಂಡು, ಕೊನೆಗೂ 1947ರಲ್ಲಿ ಆ ದೇಶಕ್ಕೆ ಹೊಸ ಸಂವಿಧಾನ (ಮ್ಯಾಕ್ ಆರ್ಥರ್) ರಚಿಸಿ ಸಂಸದೀಯ ಸರ್ಕಾರವನ್ನು ಸ್ಥಾಪಿಸಿತು. ಅಂದರೆ ಜಪಾನ್ ದೇಶದ ರಾಜಕೀಯ ಸಂಸ್ಕೃತಿಯ ಮೇಲೆ ಅಮೆರಿಕ ದೇಶವೇ ಹೆಚ್ಚಿನ ಪ್ರಭಾವವನ್ನು ಬೀರಿತು.

ಭಾರತದ ಸ್ವಾತಂತ್ರ್ಯದ ಮೊದಲು ಭಾರತೀಯ ರಾಜಕೀಯ ಸಂಸ್ಕೃತಿಯು ಗಾಂಧಿವಾದದ ತತ್ವಗಳಾದ ಸತ್ಯ, ಅಹಿಂಸೆ, ಸರಳತೆ, ವೈಜ್ಞಾನಿಕ ಮನೋಭಾವನೆ ಮತ್ತು ರಾಷ್ಟ್ರೀಯ ತತ್ವಗಳಿಂದ ಕೂಡಿರುತ್ತದೆ. ಅಧಿಕಾರದ ರಚನೆಯು ಸಂಪ್ರದಾಯದ ಆಧಾರದ ಮೇಲಿತ್ತು. ಆ ಎಲ್ಲಾ ಗಾಂಧೀವಾದದ ತತ್ವಗಳು ಮತ್ತು ರಾಷ್ಟ್ರೀಯ ತತ್ವದ ಭಾವನೆಯು ರಾಜಕೀಯದೆಡೆಗೆ ಇದ್ದ ಜನರ ನೆಲೆ ನಿರ್ದೇಶನ ಮೇಲೆ ಪ್ರಭಾವ ಬೀರಿದವು. ಆದರೆ ಸ್ವಾತಂತ್ರ್ಯದ ನಂತರ ಗಾಂಧೀವಾದದಿಂದ ಪ್ರಭಾವಿತಗೊಂಡ ಭಾರತೀಯ ರಾಜಕೀಯ ಸಂಸ್ಕೃತಿಯು ಅವನತಿಗೀಡಾಯಿತು.

ಪ್ರಸ್ತುತ ಭಾರತದಲ್ಲಿ ರಾಜಕೀಯ ನಡೆಗೆ ಇರುವ ಜನರ ನೆಲೆ ನಿರ್ದೇಶನವು ಮೂಲತಃ ಪ್ರಜಾಪ್ರಭುತ್ವದ ತತ್ವಗಳಿಂದ, ಆಧುನೀಕರಣ ಮತ್ತು ಅಭಿವೃದ್ಧಿಯ ಅಂಶಗಳಿಂದ ಪ್ರಭಾವಿತಗೊಂಡಿವೆ.

ಒಟ್ಟಾರೆಯಾಗಿ ಹೇಳುವುದಾದರೆ, ರಾಜಕೀಯ ಸಂಸ್ಕೃತಿಯು, ರಾಜಕೀಯ ಮೌಲ್ಯಗಳಾದ ಹಕ್ಕುಗಳ ಸ್ವಾತಂತ್ರ್ಯ, ಸಮಾನತೆ, ನ್ಯಾಯ, ಪತ್ರಿಕಾ ಸ್ವಾತಂತ್ರ್ಯ, ನ್ಯಾಯಾಂಗದ ಸ್ವಾತಂತ್ರ್ಯ, ಮತ್ತು ನಿಷ್ಪಕ್ಷಪಾತವಾದ ಮುಂತಾದವುಗಳೆಡೆಗೆ ಇರುವ ಜನರ ಅಭಿಪ್ರಾಯಗಳನ್ನು, ನಿಲುವುಗಳನ್ನು, ಭಾವಗಳನ್ನು, ಮನವರಿಕೆಗಳನ್ನು, ಬದ್ಧತೆಗಳನ್ನು ಮತ್ತು ನೆಲೆ ನಿರ್ದೇಶನವನ್ನು ಒಳಗೊಂಡಿರುತ್ತದೆ. ಒಂದು ರಾಜಕೀಯ ವ್ಯವಸ್ಥೆಯು ಸಫಲತೆಯಿಂದ ಅಥವಾ ವಿಫಲತೆಯಿಂದ ಕಾರ್ಯ ಮಾಡುವ ಪ್ರಕ್ರಿಯೆಯನ್ನು ಮೂಲತಃ ರಾಜಕೀಯ ಸಂಸ್ಕೃತಿಯಿಂದಲೇ ನಿರ್ಧರಿಸಲಾಗುತ್ತದೆ. ಕಾರಣ, ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ರಾಜಕೀಯ ಸಂಸ್ಕೃತಿಯು ಪ್ರಮುಖವಾಗಿ ವಿಶೇಷ ಅಥವಾ ವಿಶಿಷ್ಟವಾಗಿದೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

**ರಾಜಕೀಯ ಭಾಗವಹಿಸುವಿಕೆ:**

ಅಕ್ಷರಾರ್ಥದಲ್ಲಿ "ರಾಜಕೀಯ ಭಾಗವಹಿಸುವಿಕೆ ಎಂದರೆ, ರಾಜಕೀಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ಅಥವಾ ಪಾಲ್ಗೊಳ್ಳುವುದು ಅಥವಾ ಭಾಗವಹಿಸುವುದು." ರಾಜಕೀಯ ಸಿದ್ಧಾಂತದಲ್ಲಿ ರಾಜಕೀಯ ಭಾಗವಹಿಸುವಿಕೆಯೆಂದರೆ, ರಾಜಕೀಯ ಪ್ರಕ್ರಿಯೆಯ ಮೇಲೆ ಪ್ರಭಾವ ಬೀರುವ ಐಚ್ಛಿಕ ಚಟುವಟಿಕೆಗಳು ಮತ್ತು

ಆಳುವವರನ್ನು ಆಯ್ಕೆ ಮಾಡುವ ಮತ್ತು ಸಾರ್ವಜನಿಕ ನೀತಿಯ ರಚನೆಯ ವಿವಿಧ ಮುಖ ನೋಟಗಳನ್ನೊಳಗೊಂಡ ವಿಷಯಗಳು. ಅವುಗಳೆಂದರೆ,

- ಚುನಾವಣೆಗಳಲ್ಲಿ ಮತ ನೀಡುವುದು.
- ಒತ್ತಡ ಗುಂಪುಗಳ ಸದಸ್ಯರಾಗಿ ಅವುಗಳನ್ನು ಬೆಂಬಲಿಸುವುದು.
- ವೈಯಕ್ತಿಕವಾಗಿ ಮತ್ತು ನೇರವಾಗಿ ಶಾಸಕರೊಂದಿಗೆ ಸಂಪರ್ಕ ಬೆಳೆಸುವುದು.
- ರಾಜಕೀಯ ಪಕ್ಷದ ಚಟುವಟಿಕೆಯಲ್ಲಿ ಭಾಗವಹಿಸಿ, ಶಾಸಕರಾಗಲು ಅರ್ಹತೆಯನ್ನು ಪಡೆಯುವುದು.
- ಇತರ ನಾಗರಿಕರಿಗೆ ರಾಜಕೀಯ ಅಭಿಪ್ರಾಯಗಳ ಮಾಹಿತಿಯನ್ನು ನೀಡುವುದು ಮುಂತಾದವುಗಳು.

**ಈ ಎಲ್ಲ ಚಟುವಟಿಕೆಗಳನ್ನು ಲೆಸ್ಟರ್ ಮಿಲ್‌ಬ್ರಾಥ್ ರವರು ಕೆಳಗಿನ ಮೂರು ವಿಧಗಳಲ್ಲಿ ವಿಂಗಡಿಸುತ್ತಾರೆ.**

**1. ವಿವಾದಾತ್ಮಕ ಅಥವಾ ಕದನ ರೂಪದ ಚಟುವಟಿಕೆಗಳು**

ಅ. ಪಕ್ಷದ ಹುದ್ದೆಗಳನ್ನು ಹೊಂದುವುದು.

ಬಿ. ಪಕ್ಷದ ಅಭ್ಯರ್ಥಿಗಳಾಗಿ ಚುನಾವಣೆಗಳಲ್ಲಿ ಸ್ಪರ್ಧಿಸಿ ಹೋರಾಡುವುದು.

ಸಿ. ಪಕ್ಷ ನಿಧಿ ಸಂಗ್ರಹಿಸುವುದು.

ಡಿ. ಪಕ್ಷದ ಚುನಾವಣೆ ಪ್ರಚಾರದ ಚಳುವಳಿಯಲ್ಲಿ ಭಾಗವಹಿಸುವುದು.

**2. ಮಧ್ಯ ಅಥವಾ ಅಲ್ಪಕಾಲಿಕ ಚಟುವಟಿಕೆಗಳು**

ಅ. ಪಕ್ಷದ ಬೆಂಬಲಿಗರಂತೆ ಅಥವಾ ಸಹಾನುಭೂತಿಗರಂತೆ ಪಕ್ಷದ ಸಭೆಗಳಲ್ಲಿ ಹಾಜರಾಗುವುದು.

ಬಿ. ಪಕ್ಷ ನಿಧಿಗೆ ದೇಣಿಗೆ ನೀಡುವುದು.

ಸಿ. ಸಾರ್ವಜನಿಕ ನೌಕರರೊಂದಿಗೆ ಅಥವಾ ಪಕ್ಷದ ಸಿಬ್ಬಂದಿಯೊಂದಿಗೆ ಸಂಪರ್ಕ ಬೆಳೆಸುವುದು.

**3. ಪ್ರೇಕ್ಷಕ ಚಟುವಟಿಕೆಗಳು.**

ಅ. ಮತ ನೀಡುವುದು.

ಬಿ. ಇತರರು ಮತ ನೀಡಲು ಪ್ರಭಾವಿಸುವುದು.

ಸಿ. ರಾಜಕೀಯ ಚರ್ಚೆಗಳಲ್ಲಿ ಭಾಗವಹಿಸುವುದು.

ಹರ್ಬರ್ಟ್ ಮ್ಯಾಕ್ ಕ್ಲೊಸ್ಕಿ ರವರ ಪ್ರಕಾರ : ರಾಜಕೀಯ ಭಾಗವಹಿಸುವಿಕೆ ಎಂದರೆ "ಆಳುವವರ ಆಯ್ಕೆಯಲ್ಲಿ ಮತ್ತು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಸಾರ್ವಜನಿಕ ನೀತಿಯನ್ನು ನಿರೂಪಿಸುವಲ್ಲಿ ಸಮಾಜದ ಸದಸ್ಯರು ಹಂಚಿಕೊಳ್ಳುವ ಐಚ್ಛಿಕ ಚಟುವಟಿಕೆಗಳು".

**ರಾಜಕೀಯ ಭಾಗವಹಿಸುವಿಕೆಯ ವಿಧಗಳು (Types of Political Participation)**

1. ಸಕ್ರಿಯ ಭಾಗವಹಿಸುವಿಕೆ
2. ನಿಷ್ಕ್ರಿಯ ಭಾಗವಹಿಸುವಿಕೆ

3. ಉದ್ದೇಶಿತ ಅಥವಾ ಸಾಧನೆಯ ರಾಜಕೀಯ ಭಾಗವಹಿಸುವಿಕೆ
4. ವ್ಯಕ್ತಪಡಿಸುವ ಅಥವಾ ಅರ್ಥವತ್ತಾದ ರಾಜಕೀಯ ಭಾಗವಹಿಸುವಿಕೆ.
    - ಸಕ್ರಿಯ ಭಾಗವಹಿಸುವಿಕೆ : ಯಾರು ಸಮಯ ಶಕ್ತಿ ಮತ್ತು ಸಂಪನ್ಮೂಲಗಳನ್ನು ಹೊಂದಿದ ಸಾಮರ್ಥ್ಯವನ್ನು ಹೊಂದಿರುತ್ತಾರೆಯೋ ಅವರೇ ರಾಜಕೀಯದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ.
    - ನಿಷ್ಕ್ರಿಯ ಭಾಗವಹಿಸುವಿಕೆ : ಸಮಯ ಶಕ್ತಿ ಮತ್ತು ಸಂಪನ್ಮೂಲಗಳನ್ನು ಹೊಂದದ ವ್ಯಕ್ತಿಗಳಿಗೆ ರಾಜಕೀಯದಲ್ಲಿ ಭಾಗವಹಿಸಲು ಸಾಮರ್ಥ್ಯ ಇರುವುದಿಲ್ಲವೋ ಅದೇ ನಿಷ್ಕ್ರಿಯ ರಾಜಕೀಯ ಭಾಗವಹಿಸುವಿಕೆ.
    - ಉದ್ದೇಶಿತ ಅಥವಾ ಸಾಧನೆಯ ರಾಜಕೀಯ ಭಾಗವಹಿಸುವಿಕೆ: ಉದ್ದೇಶದ ರಾಜಕೀಯ ಭಾಗವಹಿಸುವಿಕೆಯು ಕೆಲವು ನಿಶ್ಚಿತ ಗುರಿಗಳನ್ನು ಸಾಧಿಸುವುದಕ್ಕೆ ಸೀಮಿತವಾಗಿರುತ್ತದೆ. ಉದಾಹರಣೆ:

1. ಪಕ್ಷದ ಜಯಭೇರಿಯನ್ನು ಸಾಧಿಸುವುದು.
2. ಒಂದು ಮಸೂದೆಯನ್ನು ಅಂಗೀಕರಿಸುವುದು.
3. ಪ್ರಭಾವ ಅಥವಾ ಅಂತಸ್ತಿನಲ್ಲಿ ಹೆಚ್ಚಳ.

**ವ್ಯಕ್ತಪಡಿಸುವ ಅಥವಾ ಅರ್ಥವತ್ತಾದ ರಾಜಕೀಯ ಭಾಗವಹಿಸುವಿಕೆ:** ಈ ಬಗೆಯ ರಾಜಕೀಯ ಭಾಗವಹಿಸುವಿಕೆಯು ಯಾವುದೇ ನಿಶ್ಚಿತ ಗುರಿಗಳನ್ನು ಸಾಧಿಸುವುದಕ್ಕೆ ಸೀಮಿತವಾಗಿರುವುದಿಲ್ಲ. ಇದು ಕೇವಲ ತತ್‌ಕ್ಷಣದ ತೃಪ್ತಿಯನ್ನು ಅಥವಾ ಭಾವನೆಯನ್ನು ವ್ಯಕ್ತಪಡಿಸುತ್ತದೆ.

**ರಾಜಕೀಯ ಭಾಗವಹಿಸುವಿಕೆಯ ಮೇಲೆ ಪ್ರಭಾವ ಬೀರುವ ಅಂಶಗಳು**

1. **ಮನೋವೈಜ್ಞಾನಿಕ ಅಂಶಗಳು**
2. **ರಾಜಕೀಯ ಅಂಶಗಳು ಅಥವಾ ಪರಿಸರ**
    - ಅ. ರಾಜಕೀಯ ಪಕ್ಷಗಳು
    - ಬಿ. ಸರ್ಕಾರದ ಕಾರ್ಯಕ್ರಮಗಳು
    - ಸಿ. ನೌಕರಶಾಹಿ
    - ಡಿ. ಜ್ವಲಂತ ಸಮಸ್ಯೆಗಳು ಮತ್ತು ಆದರ್ಶ ಸಿದ್ಧಾಂತಗಳು
    - ಈ. ಪ್ರಜಾಸತ್ತಾತ್ಮಕ ವಿಕೇಂದ್ರೀಕರಣ
3. **ಸಾಮಾಜಿಕ ಅಂಶಗಳು**
4. **ಆರ್ಥಿಕ ಅಂಶಗಳು**

**ಮನೋವೈಜ್ಞಾನಿಕ ಅಂಶಗಳು**

ರಾಜಕೀಯ ಭಾಗವಹಿಸುವಿಕೆಯು ಒಬ್ಬ ವ್ಯಕ್ತಿಯು ಒಂಟಿಯಾಗಿ ಬಾಳುವುದನ್ನು ಹೋಗಲಾಡಿಸಿ, ಆತನ ಮನೋವೈಜ್ಞಾನಿಕ ಅವಶ್ಯಕತೆಗಳನ್ನು ಪೂರೈಸಲು ಸಹಾಯವಾಗುತ್ತದೆ. ಅಂದರೆ,

1. ಸಾಮೂಹಿಕ ರಾಜಕೀಯ ನಂಬಿಕೆಗಳು, ಕೋಪ, ಅನುಕಂಪ ಮತ್ತು ಕಷ್ಟಗಳನ್ನು

ಹಂಚಿಕೊಳ್ಳಲು ಬುನಾದಿಯನ್ನು ಹಾಕುತ್ತದೆ.

2. ಮಾನವರು ಒಂಟಿಯಾಗಿ ಬಾಳಲು ಇಚ್ಚಿಸದೆ ಇತರರ ಸಂಗಾತಿಗಳಾಗಿ ಬಾಳಲು ರಾಜಕೀಯ ಭಾಗವಹಿಸುವಿಕೆಯು ಪೂರಕವಾಗಿರುತ್ತದೆ.
3. ವ್ಯಕ್ತಿಗಳು ಮನೋವೈಜ್ಞಾನಿಕವಾಗಿ ರಾಜಕೀಯ ಅಧಿಕಾರ ಪಡೆಯುವಲ್ಲಿ ನಿರತರಾಗುತ್ತಾರೆ.

**ರಾಜಕೀಯ ಅಂಶಗಳು ಅಥವಾ ಪರಿಸರ**

**ಅ. ರಾಜಕೀಯ ಪಕ್ಷಗಳು:** ಅಭಿವೃದ್ಧಿ ಹೊಂದಿದ ಪ್ರಜಾಸತ್ತಾತ್ಮಕ ರಾಷ್ಟ್ರಗಳ ವ್ಯವಸ್ಥೆಯಲ್ಲಿ ರಾಜಕೀಯ ಭಾಗವಹಿಸುವಿಕೆಯು ಸಾಮಾನ್ಯವಾಗಿ ಹೆಚ್ಚಿನ ಪ್ರಮಾಣದಲ್ಲಿ ಇರುತ್ತದೆ. ಆದರೆ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಅದರ ಪ್ರಮಾಣ ಕಡಿಮೆ ಇರುವುದು ಕಂಡುಬರುತ್ತದೆ. ರಾಜಕೀಯ ಪಕ್ಷಗಳ ಸಕಾರಾತ್ಮಕವಾದ ಪಾತ್ರ ಕೇವಲ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿಯೇ ವಿಶೇಷವಾಗಿ ಕಾಣಿಸಿಕೊಳ್ಳುತ್ತದೆ.

**ಬಿ. ಸರ್ಕಾರದ ಕಾರ್ಯಕ್ರಮಗಳು:** ಸರ್ಕಾರದ ಕಾರ್ಯಕ್ರಮಗಳು ಹೆಚ್ಚಾದಂತೆ ಜನರ ರಾಜಕೀಯ ಭಾಗವಹಿಸುವಿಕೆಯು ಹೆಚ್ಚುತ್ತ ಹೋಗುತ್ತದೆ. ಪ್ರಜಾಸತ್ತಾತ್ಮಕ ಸಮಾಜದಲ್ಲಿ ಸರ್ಕಾರವು ಜನರ ಕಲ್ಯಾಣಕ್ಕಾಗಿ ಅದೆಷ್ಟೋ ಕಲ್ಯಾಣ ಪರ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತದೆ. ಜನರು ತಮ್ಮ ಕಲ್ಯಾಣದ ಗುರಿಯ ಸಾಧನೆಗಾಗಿ ಸರ್ಕಾರದ ಮೇಲೆ ಸಂಘಟಿತರಾಗಿ ಒತ್ತಡ ತರುತ್ತಾರೆ.

**ಸಿ. ನೌಕರಶಾಹಿ:** ನೌಕರಶಾಹಿಯು ವಿಶೇಷವಾಗಿ ತೃತೀಯ ಜಗತ್ತಿನ ರಾಷ್ಟ್ರಗಳಲ್ಲಿ ರಾಜಕೀಯ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುತ್ತದೆ. ನೌಕರಶಾಹಿಯ ಪ್ರಮುಖ ಜವಾಬ್ದಾರಿಯೆಂದರೆ ಅಭಿವೃದ್ಧಿಯ ಸ್ವರೂಪದ ಕಾರ್ಯ ಚಟುವಟಿಕೆಗಳನ್ನು ಸಮರ್ಪಕವಾಗಿ ನಿರ್ವಹಿಸಿ ಜನರ ಕಲ್ಯಾಣವನ್ನು ಸಾಧಿಸುವುದು.

**ಡಿ. ಜ್ವಲಂತ ಸಮಸ್ಯೆಗಳು ಮತ್ತು ಆದರ್ಶ ಸಿದ್ಧಾಂತಗಳು:** ಕೆಲವು ಜ್ವಲಂತ ಸಮಸ್ಯೆಗಳು ಅಥವಾ ಸಂದರ್ಭಗಳು ಜನರನ್ನು ರಾಜಕೀಯವಾಗಿ ಆಕರ್ಷಿಸುತ್ತವೆ. ಅಂತಹ ಸಮಸ್ಯೆಗಳನ್ನು ಗಂಭೀರವಾಗಿ ಚರ್ಚಿಸುವುದರಿಂದ ಪ್ರತಿಯೊಬ್ಬ ವ್ಯಕ್ತಿಯು ಗಮನಸೆಳೆಯಲು ಸಾಧ್ಯವಾಗುತ್ತದೆ. ಉದಾಹರಣೆ, ಭಾರತದಲ್ಲಿ ಇಂದಿರಾಗಾಂಧಿಯವರು ಘೋಷಿಸಿದ ತುರ್ತುಪರಿಸ್ಥಿತಿಯು ಇಡೀ ದೇಶದ ಜನರು ಪ್ರತಿಭಟಿಸಲು ಮೂಲ ಕಾರಣವಾಯಿತು.

**ಉ. ಪ್ರಜಾಸತ್ತಾತ್ಮಕ ವಿಕೇಂದ್ರೀಕರಣ:** ಸ್ಥಳೀಯ ಸರ್ಕಾರದ ಸಮಸ್ಯೆಗಳಿಗೆ ನಡೆಯುವ ಚುನಾವಣೆಗಳು ಸ್ಥಳೀಯ ಜನರು ರಾಜಕೀಯದಲ್ಲಿ ಭಾಗವಹಿಸಲು ಪ್ರಮುಖ ಸಾಧನವಾಗಿವೆ. ಹಾಗೆಯೇ ಅಧಿಕಾರದ ವಿಕೇಂದ್ರೀಕರಣವು ಸ್ಥಳೀಯ ಜನರೇ ತಮ್ಮ ಸರ್ಕಾರವನ್ನು ರಚಿಸಲು ಪೂರಕವಾಗುತ್ತದೆ. ಪಂಚಾಯತ್ ರಾಜ್ ವ್ಯವಸ್ಥೆಯೆಂದರೆ ಸ್ಥಳೀಯ ಜನರೇ ತಮ್ಮನ್ನು ತಾವೇ ಆಳುವುದು. ಸ್ಥಳೀಯ ಸಂಸ್ಥೆಗಳ ಪ್ರಜಾಪ್ರಭುತ್ವದ ನಿಜವಾದ ಬುನಾದಿಗಳು.

**ಸಾಮಾಜಿಕ ಅಂಶಗಳು**

ಸಾಮಾಜಿಕ ಪರಿಸರವು ಮೂಲತಃ ಧರ್ಮ, ಜಾತಿ, ವರ್ಗ, ಲಿಂಗ, ಕುಲ, ಶಿಕ್ಷಣ, ವಯಸ್ಸು, ವಾಸಸ್ಥಳ ಮುಂತಾದ ಅಂಶಗಳಿಂದ ಕೂಡಿರುತ್ತದೆ. ಜನರ ಸಮೂಹವನ್ನು ರಾಜಕೀಯವಾಗಿ ಸಜ್ಜುಗೊಳಿಸಲು ಧರ್ಮವನ್ನು ಬಳಸಲಾಗುತ್ತದೆ. ಉದಾರವಾದಿಯ ಧರ್ಮವು ಸಮಾಜದ ವಿವಿಧ ಭಾಗಗಳ ಅಂದರೆ ಸ್ತ್ರೀಯರ ಮತ್ತು ಹಿಂದುಳಿದ ವರ್ಗಗಳ

ರಾಜಕೀಯ ಭಾಗವಹಿಸುವಿಕೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಪ್ರೋತ್ಸಾಹಿಸಿದರೆ, ಸಾಂಪ್ರದಾಯಿಯ ಧರ್ಮವು ಸ್ತ್ರೀಯರ ರಾಜಕೀಯ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುವುದಿಲ್ಲ. ಕೆಲವು ರಾಜಕೀಯ ಪಕ್ಷಗಳಿಗೂ ಕೂಡ ಧರ್ಮದ ಆಧಾರದ ಮೇಲೆಯೇ ರಚಿಸಲ್ಪಡುತ್ತದೆ. ಜಾತಿಯ ಸಂಘಟನೆಗಳು, ರಾಜಕೀಯ ಮತ್ತು ಆರ್ಥಿಕ ಲಾಭಗಳಿಗಾಗಿ ತಮ್ಮ ಜನರನ್ನು ರಾಜಕೀಯವಾಗಿ ಸಜ್ಜುಗೊಳಿಸಿ ಅವರ ರಾಜಕೀಯ ಭಾಗವಹಿಸುವಿಕೆಯನ್ನು ಹೆಚ್ಚಿಸಿದ ಎಷ್ಟೋ ಉದಾಹರಣೆಗಳಿವೆ.

**ಆರ್ಥಿಕ ಅಂಶಗಳು**

ಆರ್ಥಿಕ ಅಂಶಗಳಾದ ವೃತ್ತಿ ಮತ್ತು ಆದಾಯ (ರಾಷ್ಟ್ರೀಯ ಮತ್ತು ತಲಾ)ಗಳು ರಾಜಕೀಯ ಭಾಗವಹಿಸುವಿಕೆಯು ಮೇಲೆ ಪ್ರಭಾವ ಬೀರುತ್ತದೆ. ಉನ್ನತ ಮಟ್ಟದ ವೃತ್ತಿಗಳನ್ನು ಹೊಂದಿರುವ ವ್ಯಕ್ತಿಗಳ ರಾಜಕೀಯ ಭಾಗವಹಿಸುವಿಕೆಯ ಪ್ರಮಾಣ ಅತಿಹೆಚ್ಚಿನ ಪ್ರಮಾಣದಲ್ಲಿ ಇರುತ್ತದೆ. ಏಕೆಂದರೆ ಆ ವ್ಯಕ್ತಿಗಳು ಸುರಕ್ಷಿತರು ಮತ್ತು ಅವರ ಬೌದ್ಧಿಕಮಟ್ಟ ಹೆಚ್ಚಾಗಿರುವುದರಿಂದ ಎಲ್ಲಾ ಸಮಸ್ಯೆಗಳ ಸ್ಪಷ್ಟವಾದ ಜ್ಞಾನವಿರುತ್ತದೆ. ಹಾಗೆಯೇ ಅವರಿಗೆ ತಮ್ಮ ಸುತ್ತಮುತ್ತಲಿನ ರಾಜಕೀಯ ಪರಿಸರದ ಬಗ್ಗೆ ಮಾಹಿತಿಯು ಪ್ರಾಪ್ತವಾಗಿರುತ್ತದೆ.

ಹೆಚ್ಚಿನ ಆದಾಯವೆಂದರೆ ಹೆಚ್ಚಿನ ಸಮೃದ್ಧಿ ಅಥವಾ ಸಂಪತ್ತು, ಹೆಚ್ಚಿನ ಬಿಡುವು, ಕಡಿಮೆ ಪ್ರಮಾಣದ ಚಿಂತೆ ಮತ್ತು ಹೆಚ್ಚಿನ ಅವಕಾಶಗಳು. ಈ ಎಲ್ಲಾ ಅಂಶಗಳು ಹೊಂದಿರುವ ವ್ಯಕ್ತಿಗಳು ರಾಜಕೀಯದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಪಾಲ್ಗೊಳ್ಳುತ್ತಾರೆ. ಹೀಗೆ ಹೆಚ್ಚಿನ ಪ್ರಮಾಣದ ಆರ್ಥಿಕ ಸಂಪತ್ತು ಒಬ್ಬ ವ್ಯಕ್ತಿಯು ರಾಜಕೀಯದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಪ್ರಮುಖ ಅಂಶವಾಗಿರುತ್ತದೆ.

**ರಾಜಕೀಯ ಭಾಗವಹಿಸುವಿಕೆಯ ಮಹತ್ವ:**

ರಾಜಕೀಯದಲ್ಲಿ ತೊಡಗಿಸಿಕೊಳ್ಳುವುದು ಅಥವಾ ರಾಜಕೀಯ ಪಾಲ್ಗೊಳ್ಳುವಿಕೆಯು ಸಕಾರಾತ್ಮಕವಾದ ಅಥವಾ ಲಾಭದಾಯಕ ಫಲಿತಾಂಶಗಳಿಂದ ಕೂಡಿದೆ. ಅದನ್ನು ಈ ಕೆಳಕಂಡಂತೆ ಸ್ಪಷ್ಟಪಡಿಸಲಾಗಿದೆ.

1. ರಾಜಕೀಯ ಪಾಲ್ಗೊಳ್ಳುವಿಕೆಯು ಪ್ರಜಾಪ್ರಭುತ್ವದ ಬುನಾದಿಯನ್ನು ಭದ್ರಪಡಿಸುತ್ತದೆ. ಪ್ರಜಾಪ್ರಭುತ್ವದ ಪ್ರಕ್ರಿಯೆಯು ರಾಜಕೀಯ ಪಾಲ್ಗೊಳ್ಳುವಿಕೆಯ ಮೂಲಕ ಅರಸೊತ್ತಿಗೆ ಅಥವಾ ನಿರಂಕುಶಪ್ರಭುತ್ವವನ್ನು ಸಂವಿಧಾನಾತ್ಮಕ ಪ್ರಜಾಪ್ರಭುತ್ವದಲ್ಲಿ ಮಾರ್ಪಡಿಸಿದೆ. ಪ್ರಜಾಪ್ರಭುತ್ವದ ವ್ಯಾಪ್ತಿಯು ರಾಜಕೀಯ ಭಾಗವಹಿಸುವಿಕೆಯಿಂದ ವಿಶಾಲಗೊಳಿಸಲಾಗಿದೆ. ಪ್ರಜಾಪ್ರಭುತ್ವದ ಯಶಸ್ವಿಯಾದ ಕಾರ್ಯವಿಧಾನವು ನಾಗರಿಕರ ರಾಜಕೀಯ ಪಾಲ್ಗೊಳ್ಳುವಿಕೆಯ ಮೂಲಕವೇ ನಿರ್ಧಾರವಾಗುತ್ತದೆ. ಆಳುವವರ ದಬ್ಬಾಳಿಕೆಗೆ ಪ್ರಜಾಪ್ರಭುತ್ವದಲ್ಲಿ ಯಾವ ಸ್ಥಾನವು ಇರುವುದಿಲ್ಲ.
2. ರಾಜಕೀಯ ಭಾಗವಹಿಸುವಿಕೆಯು ನೀತಿ ನಿರ್ಣಯಗಳನ್ನು ರೂಪಿಸುವವರೆಗೆ ಮತ್ತು ಅವುಗಳನ್ನು ಜಾರಿಗೊಳಿಸುವವರೆಗೆ ಮಹತ್ವವಾದ ಮಾಹಿತಿಯನ್ನು ನೀಡಿ ಕಾಲಕ್ಕೆ ತಕ್ಕಂತೆ ಆ ನೀತಿಗಳನ್ನು ಮಾರ್ಪಾಡು ಮಾಡಲು ಸಹಾಯವಾಗುತ್ತದೆ.
3. ರಾಜಕೀಯ ಭಾಗವಹಿಸುವಿಕೆಯು ಜವಾಬ್ದಾರಿಯುತ ಸರ್ಕಾರವನ್ನು ಮತ್ತು ನ್ಯಾಯ ಬದ್ಧತೆಯ ಅಧಿಕಾರವನ್ನು ಖಚಿತಗೊಳಿಸುತ್ತದೆ.
4. ರಾಜಕೀಯ ಪಾಲ್ಗೊಳ್ಳುವಿಕೆಯು ಒಬ್ಬ ವ್ಯಕ್ತಿಯ ಸಾರ್ವಜನಿಕ ವ್ಯವಹಾರಗಳಲ್ಲಿ

ತೊಡಗಿಸಿಕೊಳ್ಳುವ ಪ್ರವೃತ್ತಿಯನ್ನು ಪ್ರೇರಿಸುತ್ತದೆ.

5. ರಾಜಕೀಯ ಪಾಲ್ಗೊಳ್ಳುವಿಕೆಯ ಮುಖಾಂತರವೇ ನಾಗರಿಕರು ತಮ್ಮ ಒಲವು ಅಥವಾ ಆಯ್ಕೆಗಳ ಮಾಹಿತಿಯನ್ನು ರಾಜಕೀಯ ಧುರೀಣನಿಗೆ ನೀಡಿ ಆ ಒಲವುಗಳನ್ನು ನೆರವೇರುವಂತೆ ಒತ್ತಾಯಿಸುತ್ತಾರೆ.
6. ರಾಜಕೀಯ ಪಾಲ್ಗೊಳ್ಳುವಿಕೆಯು ಧುರೀಣರ ಮತ್ತು ಪಕ್ಷಗಳ ಅಧಿಕಾರದ ಏರಿಳಿತಗಳಿಗೆ ಕಾರಣವಾಗುತ್ತದೆ.
7. ಪರಿಣಾಮಕಾರಿಯ ರಾಜಕೀಯ ಪಾಲ್ಗೊಳ್ಳುವಿಕೆಯು ಸರ್ಕಾರ, ಧುರೀಣತ್ವ, ಸಾರ್ವಜನಿಕ ನೀತಿಗಳ ಮತ್ತು ಕಾರ್ಯಕ್ರಮಗಳಲ್ಲಿ ಮಹತ್ವದ ಬದಲಾವಣೆಯನ್ನು ತರುವ ಪ್ರಜಾಪ್ರಭುತ್ವದಲ್ಲಿರುವ ಶಸ್ತ್ರ ರಹಿತ ಸಾಮೂಹಿಕ ಜನರ ಒಂದು ರಾಜಕೀಯ ಅಸ್ತ್ರವಾಗಿದೆ.
8. ಪ್ರಬುದ್ಧವಾದ ಪ್ರಜಾಸತ್ತಾತ್ಮಕ ವ್ಯವಸ್ಥೆಯ ರಾಜಕೀಯದಲ್ಲಿ ಪಾಲ್ಗೊಳ್ಳದ ವ್ಯಕ್ತಿಯು ತನ್ನಿಂದ ತಾನೇ ವಂಚಿತನಾಗಿ ಪಶ್ಚಾತ್ತಾಪ ಪಡಬೇಕಾಗುತ್ತದೆ.
9. ರಾಜಕೀಯ ಭಾಗವಹಿಸುವಿಕೆಯು ಸ್ವಯಂ ತೃಪ್ತಿ ನೀಡುವ ಗುರಿಯು ಹೌದು ಮತ್ತು ಇತರರ ಗುರಿಗಳನ್ನು ಸಾಧಿಸಲು ಇರುವ ಸಾಧನವು ಹೌದು.

**ಉಪಸಂಹಾರ:**

ರಾಜ್ಯದ ಚಟುವಟಿಕೆಗಳಲ್ಲಿ ಬಹಳಷ್ಟು ಜನರನ್ನು ತೊಡಗಿಸಿಕೊಳ್ಳುವುದರಿಂದ ಭಾಗವಹಿಸುವಿಕೆಯು ಸ್ಥಿರತೆ ಮತ್ತು ವ್ಯವಸ್ಥೆಯನ್ನು ಪ್ರೋತ್ಸಾಹಿಸುತ್ತದೆ ಮತ್ತು ಪ್ರತಿ ವ್ಯಕ್ತಿಗೆ ತನ್ನ ಹಿತಾಸಕ್ತಿಗಳನ್ನು ವ್ಯಕ್ತಪಡಿಸಲು ಅವಕಾಶ ಕಲ್ಪಿಸಿ, ಅತ್ಯಧಿಕ ಸಂಖ್ಯೆಯ, ಅತ್ಯಧಿಕ ಕಲ್ಯಾಣವನ್ನು ಸಾಧಿಸುವಲ್ಲಿ ಪೂರಕವಾಗುತ್ತದೆ. ಅದಕ್ಕಾಗಿಯೇ ಎರಡನೇ ಜಾಗತಿಕ ಯುದ್ಧದ ನಂತರ ಅಮೆರಿಕ ರಾಜಕೀಯ ಶಾಸ್ತ್ರದ ಪಂಡಿತರು ವರ್ತಮಾನದ ಕ್ರಾಂತಿಯ ಮೂಲಕ ರಾಜಕೀಯ ಭಾಗವಹಿಸುವಿಕೆಯ ವಿಷಯವನ್ನು ಕುರಿತು ಸಾಕಷ್ಟು ಸಂಶೋಧನೆಗಳನ್ನು ಮಾಡಿ ಕೆಲವು ಗಣನೀಯ ಸಾಧನೆಗಳನ್ನು ಮಾಡಿರುವುದು ಪ್ರಶಂಸನೀಯ.

ಅಂತಹ ಸಂಶೋಧನೆ ಮಾಡಿದ ಪ್ರಮುಖ ರಾಜಕೀಯ ತಜ್ಞರು ಎಂದರೆ ರಾಬರ್ಟ್ ದಾಲ್, ಡೇವಿಡ್ ಈಸ್ಟನ್, ಹೆಚ್. ಡಿ. ಲಾಸ್ವೆಲ್, ಎಸ್. ಎಂ. ಲಿಪ್ಸೆಟ್, ಜಿ. ಎ. ಆಲ್ಮಂಡ್ ಇನ್ನೂ ಮುಂತಾದವರು.

ಅದೇ ತೆರನಾದ ಸಂಶೋಧನೆ ಮಾಡಿದ ಭಾರತೀಯ ರಾಜಕೀಯ ಶಾಸ್ತ್ರಜ್ಞರು ಎಂದರೆ ಇಕ್ಬಾಲ್ ನಾರಾಯಣ್, ಎಸ್. ಪಿ. ಶರ್ಮ, ಕೆ. ಶೇಷಾದ್ರಿ, ರಜನಿ ಕೊಠಾರಿ ಮುಂತಾದವರು.

## ಪರಾಮರ್ಶನ ಗ್ರಂಥಗಳು:


1. Robert Dahl: Modern Political Analysis
2. Lord Bryce: Modern Democracies
3. John Seeley : Introduction to Political Science
4. Vidya Bhushan : Comparative Politics
5. Maheshwari S R : Comparative Politics
6. David Easton: An Inquiry into the state of political theory
7. A C Kapur : Principles of Political Thought
8. Lipson: The Great Issues of Politics
9. J C Johari: Principles of Political Thought
10. J C Johari: Contemporary Political Theory



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.